**SC No. 282/2023**
**PW-2**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 282/2023**

| | | |
|---|---|---|
| ಸಾಕ್ಷಿದಾರರ ಹೆಸರು | ಚಿನ್ನಸ್ವಾಮಿ | ಪ್ರಮಾಣ ವಚನ ಮಾಡಿದ ದಿನಾಂಕ: 17.03.2026 |
| ತಂದೆಯ/ಗಂಡನ ಹೆಸರು | ಲೇಟ್ ಕೆಂಪನಾಯಕ | |
| ವಯಸ್ಸು | 56 ವರ್ಷ | |
| ವೃತ್ತಿ | Supervisor, BEML | ಪ್ರಾ.ಸಾಃ 2 |
| ವಾಸ ಸ್ಥಳ | ಹೊಸಕೋಟೆ ಗ್ರಾಮ | ಚಾ.ಸಾಃ 3 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಫ್ರಾಸಾ–1 ನನ್ನ ಬಾವನಾಗಬೇಕು. ಆರೋಪಿ ಬಾವನಮಗ ಇರುತ್ತಾನೆ. ಚಾಸಾ–2 ನನ್ನ ಅಕ್ಕ ಇರುತ್ತಾರೆ. ಫ್ರಾಸಾ–1 ಮತ್ತು ಆರೋಪಿತನ ನಡುವೆ ಯಾವ ವಿಚಾರದಲ್ಲಿ ವಿವಾದ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಆಸ್ತಿ ಸಂಬಂಧವಾಗಿ ಆರೋಪಿತನು ಫ್ರಾಸಾ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಫ್ರಾಣ ಬೆದರಿಕೆ ಹಾಕಿ ಮಚ್ಚಿನಿಂದ ಹಲ್ಲೆ ಮಾಡಿದ್ದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಪೊಲೀಸರ ಮುಂದೆ ಈ ಬಗ್ಗೆ ಹೇಳಿಕೆ ಕೊಟ್ಟಿರುವುದಿಲ್ಲ. ಮತ್ತು ನ್ಯಾಯಾಧೀಶರ ಮುಂದೆ ಈ ಬಗ್ಗೆ ಹೇಳಿಕೆ ಕೊಟ್ಟ ಬಗ್ಗೆ ನನಗೆ ನೆನಪಲ್ಲಿ ಇರುವುದಿಲ್ಲ. ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ

ಹೇಳಿಕೆಗಳನ್ನು ನಿಪಿ-4 ಎಂದು ಸಾಕ್ಷಿದಾರರ ಸಹಿಗಳನ್ನು ನಿಪಿ-4 (ಎ) ಮತ್ತು ನಿಪಿ-4(ಬಿ) ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿ ಏನು ಬರೆದಿರುತ್ತದೆ ಎಂದು ಮಾಹಿತಿ ಇಲ್ಲ. ನಾನು ಈಗ ನುಡುತ್ತಿರುವ ಎಂ.ಒ-1 ರಿಂದ 4 ರ ಬಗ್ಗೆ ಮಾಹಿತಿ ಇರುವುದಿಲ್ಲ ಈ ಹಿಂದೆ ನಾನು ನೋಡಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಆರೋಪಿತನಿಗೂ ಮತ್ತು ಫ್ರಾಸಾ-1 ರವರಿಗೂ ಜಮೀನಿನ ವಿಚಾರದಲ್ಲಿ ಆಗಾಗ್ಗೆ ಜಗಳ ಆಗುತ್ತಿತ್ತು ಎಂದರೆ ಸರಿಯಲ್ಲ. ಆರೋಪಿತನು ಫ್ರಾಸಾ-1 ರವರ ಹೆಸರಿಗೆ ಇರುವ ಹೊಸಕೋಟೆ ಗ್ರಾಮದ ಸರ್ವೆ ನಂಬರ್ 308 ರಲ್ಲಿ 16 ಗುಂಟೆ ಜಮೀನನ್ನು ತನ್ನ ಹೆಸರಿಗೆ ಮಾಡಿಕೊಡು ಎಂದು ಆಗಾಗ್ಗೆ ಜಗಳ ಮಾಡುತ್ತಿದ್ದ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ದಿನಾಂಕ 14.03.2023 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಫ್ರಾಸಾ-1 ರವರು ಮನೆಯ ಮುಂದಿನ ರಸ್ತೆಯಲ್ಲಿ ಇದ್ದಾಗ ಆರೋಪಿತನು ಫ್ರಾಸಾ-1 ರವರಿಗೆ ಜಮೀನಿನ ವಿಚಾರದಲ್ಲಿ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದ ನಾನು ನನ್ನ ಮನೆಯ ಬಳಿ ಇರುವಾಗ ಕೂಗಾಡುವ ಶಬ್ದ ಕೇಳಿ ಅಲ್ಲಿ ಹೋಗಿ ನೋಡಲಾಗಿ ಆರೋಪಿತನ ಕೈಯಲ್ಲಿ ಮಚ್ಚು ಇತ್ತು ಫ್ರಾಸಾ-1 ಕೆಳಗಡೆ ಬಿದ್ದದ್ದರು ಬೆನ್ನಿನ ಬಳಿ ಮತ್ತು ಬಲಗಾಲಿಗೆ ಗಾಯ ಆಗಿ

ಬಟ್ಟೆಗಳಿಗೆ ರಕ್ತ ಆಗಿತ್ತು ಆರೋಪಿತರು ನನ್ನನ್ನು ಮತ್ತು ದೇವಮ್ಮನನ್ನು ನೋಡಿ ಅಲ್ಲಿಂದ ಓಡಿ ಹೋಗಿದ್ದ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪ್ರಾಸಾ–1 ರವರನ್ನು ವಿಚಾರಿಸಿದಾಗ ಜಮೀನಿನ ವಿಚಾರದಲ್ಲಿ ಜಗಳ ತೆಗೆದು ಮಚ್ಚಿನಿಂದ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾನೆ ಎಂದು ಹೇಳಿದ್ದರು ನಾನು ಕೂಡಲೇ ಪ್ರಾಸಾ–1 ರವರನ್ನು ಕೆ.ಅರ್. ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ನಿಪಿ–5 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನ್ನ ಅಕ್ಕನ ಮಗ ಇರುವುದರಿಂದ ಆತನಿಗೆ ಅನುಕೂಲವಾಗಲೀ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :</u>**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**<u>ಮರವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**